ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರಾಥಮಿಕ ಶಿಕ್ಷಣ ರಾಜ್ಯ ಮಂತ್ರಿಗಳು):—

ಅ) ಮಾಡಲಾಗುತ್ತಿದೆ

ಆ) ವಿತರಣೆ ಮಾಡಲಾಗಿದೆ

ಇ) ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಪಟ್ಟಿಯನ್ನು ಸಭೆಯ ಮುಂದಿಡಲಾಗಿದೆ.

ರೈತರಿಂದ ಬರಬೇಕಾದ ಬಾಕಿ ವಸೂಲಿ ಮುಂತಾ ಮಾಡುವುದು

೧೬೪೦. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಕಂದಾಯ, ಯೋಜನಾ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಭೂಸಾರ ಸಂರಕ್ಷಣೆ ಇಲಾಖೆಯಿಂದ ನಿರ್ಮಿಸಿರುವ ಬದು ಮೊದಲಾದ ಕಾಮಗಾರಿಗಳ ವೆಚ್ಚದಲ್ಲಿ ಸರ್ಕಾರಕ್ಕೆ ರೈತರಿಂದ ಬರಬೇಕಾದ ಬಾಕಿ ವಸೂಲಿ ಮುಂತಾ ಮಾಡುವುದಾಗಿ ಸರ್ಕಾರದವರು ಹೇಳಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಈವರೆವಿಗೂ ಆದೇಶ ಹೊರಡಿಸದ ಅಧಿಕಾರಿಗಳು ಹಣ ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಸಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು).—

ಅ) ಬದು ನಿರ್ಮಾಣ ಸಾಲಕ್ಕೆ ಸಂಬಂಧಿಸಿದಂತೆ ಸರ್ಕಾರವು ಈಗಾಗಲೇ ನೀಡಿರುವ ರಿಯಾಯಿತಿಗಳನ್ನು ಇನ್ನು ಒಂದು ವರ್ಷದ ಅವಧಿಯವರೆಗೆ ಮುಂದುವರೆಸುವುದಾಗಿ ಹೇಳಿರುವುದು ನಿಜ.

ಆ) ಇಲ್ಲ. ಸಣ್ಣ ಮತ್ತು ಅತಿ ಸಣ್ಣ ರೈತರುಗಳಿಗೆ ದಿನಾಂಕ ೩೦-೧೧-೮೨ರಂದು ಇದ್ದ ಬಾಕಿ ಹಣವನ್ನು ಪೂರ್ತಿ ವಜಾ ಮಾಡಿದೆ. ನಂತರ ಭೂಸಾರ ಸಂರಕ್ಷಣಾ ಕಾರ್ಯದ ವೆಚ್ಚವನ್ನು ದಿನಾಂಕ ೧-೧೨-೮೨ರ ನಂತರವೂ ವಸೂಲು ಮಾಡದಂತೆ ಸರ್ಕಾರ ಆದೇಶವನ್ನು ಹೊರಡಿಸಿದೆ. ಇತರೆ ರೈತರಿಂದ ದಿನಾಂಕ ೩೦-೩-೮೮ರಂದು ಇದ್ದ ಬದುವಿನ ಬಾಕಿ ಹಣದಲ್ಲಿ ಶೇಕಡ ೫೦ ರಷ್ಟು ಹಣವನ್ನು ದಿನಾಂಕ ೩೦-೩-೮೮ರೊಳಗಾಗಿ ಪಾವತಿ ಮಾಡಿದರೆ ಅಂತಹ ರೈತರಿಗೆ ಉಳಿದ ಶೇಕಡ ೫೦ ರಷ್ಟು ಬದುಬಾಕಿಯನ್ನು ಕಟ್ಟಬೇಕಾಗಿಲ್ಲವೆಂಬ ಆದೇಶವನ್ನು ದಿನಾಂಕ ೨೫-೫-೮೮ರಂದು ಹೊರಡಿಸಲಾಗಿದೆ.

ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾಲಯಕ್ಕೆ ಪಡೆದಿರುವ ಜಮೀನಿಗೆ ಬಗ್ಗೆ

೧೬೮೧. ಶ್ರೀ ಮಲ್ಲಿಕಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಎಷ್ಟು ಸಕ್ಕರೆ ಕಾರ್ಖಾನೆಗಳಿಂದ ಧಾರವಾಡ ಕೃಷಿ ವಿಶ್ವ ವಿದ್ಯಾನಿಲಯಕ್ಕೆ ಜಮೀನಿಗೆ ಬಂದಿದೆ ;

ಆ) ಜಮೀನಿಗೆ ಸಂಬಂಧಿಸಿದಂತೆ ಕಬ್ಬು ಪೂರೈಸಿದ ರೈತರಿಂದ ಪ್ರತಿ ಟನ್ನಿಗೆ ಎಷ್ಟು ಹಣ ಸಂಗ್ರಹ ಮಾಡಲಾಗಿದೆ ?